(2) ಮಂಡ್ಯ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ವಿದ್ಯುತ್ ವೋಲ್ಟೇಜನ್ನು ಉತ್ತಮ ಪಡಿಸುವ ಸಲುವಾಗಿ ಸಬ್‌ಸ್ಟೇಷನ್ ಕಾರ್ಯ ಪ್ರಾರಂಭಿಸಲು ವಿಳಂಬ.

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ):- ಮಾನ್ಯ ಅಧ್ಯಕ್ಷರೆ, ಮಂಡ್ಯಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ವಿದ್ಯುತ್ ವೋಲ್ಟೇಜ್‌ಅನ್ನು ಉತ್ತಮ ಪಡಿಸುವ ಸಲುವಾಗಿ ಶ್ರೀರಂಗಪಟ್ಟಣ, ಕೊಪ್ಪ, ಬಸರಾಳು, ನಾಗಮಂಗಲ, ಮಂಡ್ಯ, ಈ ಸ್ಥಳಗಳಲ್ಲಿ 66 ಕೆ.ವಿ.ಯ ಸಬ್‌ಸ್ಟೇಷನ್ ಅನ್ನು ಸ್ಥಾಪಿಸಬೇಕೆಂದು, ಕಾರ್ಯಕ್ರಮವನ್ನು ರೂಪಿಸಲಾಗಿದೆ. ಆದರೆ ಈ ಸಬ್‌ಸ್ಟೇಷನ್‌ನ್ನು ಸ್ಥಾಪಿಸುವ ಕಾರ್ಯ ಪ್ರಾರಂಭಿಸಲು ಇನ್ನೂ ಕೂಡ ಚಾಲನೆ ಸಿಕ್ಕಿಲ್ಲ. ಇದರಿಂದಾಗಿ ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ಗ್ರಾಮಾಂತರ ಪ್ರದೇಶದ ರೈತರಿಗೆ ತುಂಬಾ ತೊಂದರೆಯಾಗಿದೆ. ಅಲ್ಲದೆ, ಮಂಡ್ಯ ವಿದ್ಯುತ್ ವಿಭಾಗದಲ್ಲಿ ವಿದ್ಯುದ್ದೀಕರಣಕ್ಕೆ ಸಂಬಂಧಪಟ್ಟ ಸಾಮಗ್ರಿಗಳ ಕೊರತೆಯಿಂದ ಗ್ರಾಹಕರಿಗೆ, ರೈತರಿಗೆ ತುಂಬಾ ಅನಾನೂಕೂಲವಾಗಿದೆ. ಈ ಸಬ್‌ಸ್ಟೇಷನ್‌ಗಳನ್ನು ಸ್ಥಾಪಿಸುವ ಕಾರ್ಯವನ್ನು ಜರೂರಾಗಿ ತೆಗೆದುಕೊಳ್ಳಬೇಕೆಂದೂ ಹಾಗೂ ವಿದ್ಯುತ್ ಸಾಮಗ್ರಿಗಳ, ಉಪಕರಣಗಳ ಕೊರತೆಯನ್ನು ನಿವಾರಿಸಲು, ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಸರ್ಕಾರಕ್ಕೆ ಒತ್ತಾಯಪಡಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು):- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಉತ್ತರವನ್ನು ಕೊಡುತ್ತೇನೆ.

ಶ್ರೀರಂಗಪಟ್ಟಣದಲ್ಲಿ ಮಂಡಳಿಯು ಒಂದು 66:11 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಸದರೀ ಉಪ-ವಿದ್ಯುತ್ ಕೇಂದ್ರದಲ್ಲಿ ಒಂದು 6.3 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು 80 ಲಕ್ಷ ರೂಪಾಯಿಗಳು. ಪ್ರಸ್ತುತ ಆರ್ಥಿಕ ವರ್ಷದ (1992-93) ಆಯವ್ಯಯದಲ್ಲಿ 20 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದ್ದು, ಅಗತ್ಯವಿರುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಬರುವ ಆರ್ಥಿಕ ವರ್ಷ (1993-94)ರಲ್ಲಿ ನಿರ್ಮಾಣ ಕಾರ್ಯವನ್ನು ಆರಂಭಿಸಿ ಆದಷ್ಟು ಜಾಗ್ರತೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

ಕೊಪ್ಪದಲ್ಲಿ ಮಂಡಳಿಯು ಒಂದು 66:11 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಸದರೀ ಉಪ ವಿದ್ಯುತ್ ಕೇಂದ್ರದಲ್ಲಿ ಒಂದು 6.3 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ಟ್ಯಾಪ್‌ಲೈನು ಸೇರಿದಂತೆ ಸುಮಾರು 70 ಲಕ್ಷ ರೂಪಾಯಿ. ಪ್ರಸ್ತುತ ಆರ್ಥಿಕ ವರ್ಷದ (1992-93) ಆಯವ್ಯಯದಲ್ಲಿ 30 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದ್ದು, ಅಗತ್ಯವಿರುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಮತ್ತು ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಸದರೀ ಉಪ ವಿದ್ಯುತ್ ಕೇಂದ್ರಕ್ಕೆ ಸುಮಾರು 10 ಕಿಲೋಮೀಟರ್ ಉದ್ದದ 66 ಕೆ.ವಿ. ಟ್ಯಾಪ್‌ಲೈನನ್ನು ನಿರ್ಮಾಣ ಮಾಡಬೇಕಾಗಿದ್ದು, ಲೈನಿನ ನಿರ್ಮಾಣ ಕಾರ್ಯವನ್ನು ಟವರ್‌ಗಳು ಪೂರ್ಣ ಪ್ರಮಾಣದಲ್ಲಿ ಸರಬರಾಜಾದನಂತರ ಪ್ರಾರಂಭಿಸಲಾಗುವುದು. ಟ್ಯಾಪ್‌ಲೈನು ಮತ್ತು ಉಪ ವಿದ್ಯುತ್ ಕೇಂದ್ರದ ನಿರ್ಮಾಣವನ್ನು 1993-94ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

ಮಂಡ್ಯ ತಾಲ್ಲೂಕಿನ ಬಸರಾಳಿನಲ್ಲಿ ಒಂದು 66:11 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಇದಕ್ಕೆ ಮಂಡಳಿಯ ತಾಂತ್ರಿಕ ಸಮಿತಿಯ ಮಂಜೂರಾತಿ

ದೊರೆತಿದೆ. ಈ ಉದ್ದೇಶಿಸಿದ ಉಪ ವಿದ್ಯುತ್ ಕೇಂದ್ರಕ್ಕೆ ಆಗತ್ಯವಿರುವ ಜಮೀನನ್ನು ಮಂಡ್ಯ ತಾಲ್ಲೂಕಿನ ತಹಶೀಲ್ದಾರ್‌ರವರು ಮಂಜೂರು ಮಾಡಬೇಕಾಗಿದೆ. ಸದರೀ ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಕಾರ್ಯವನ್ನು ಕೊಪ್ಪ ಉಪ ವಿದ್ಯುತ್ ಕೇಂದ್ರದ ನಿರ್ಮಾಣ ಪೂರ್ಣಗೊಳಿಸಿದ ನಂತರ ತೆಗೆದುಕೊಳ್ಳಲಾಗುವುದು ಮತ್ತು ಆದಷ್ಟು ಜಾಗ್ರತೆ ಪೂರ್ಣಗೊಳಿಸಲು ಎಲ್ಲಾ ಪ್ರಯತ್ನ ಮಾಡಲಾಗುವುದು. ನಾಗಮಂಗಲ ತಾಲ್ಲೂಕಿನ ಬಿ.ಜಿ. ನಗರದಲ್ಲಿ ಮಂಡಳಿಯು ಒಂದು 66:11 ಕೆ.ವಿ. ಉಪ ವಿದ್ಯುತ್ ಕೇಂದ್ರವನ್ನು ನಿರ್ಮಾಣ ಘಾಡಲು ಉದ್ದೇಶಿಸಿದ್ದು, ಸದರೀ ಉಪ ವಿದ್ಯುತ್ ಕೇಂದ್ರದಲ್ಲಿ ಒಂದು 6.3 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸ್‌ಫಾರ್ಮರನ್ನು ಸ್ಥಾಪಿಸಲಾಗುವುದು. ಈ ಕಾರ್ಯಕ್ಕೆ ತಗಲುವ ಅಂದಾಜು ವೆಚ್ಚ ಟ್ಯಾಪ್‌ಲೈನು ಸೇರಿದಂತೆ ಸುಮಾರು 97 ಲಕ್ಷ ರೂಪಾಯಿಗಳು. ಸುಮಾರು 15 ಕಿಲೋಮೀಟರು ಉದ್ದದ 66 ಕೆ.ವಿ. ಟ್ಯಾಪ್‌ಲೈನನ್ನು ನಿರ್ಮಾಣ ಮಾಡಲಾಗುವುದು. ಪ್ರಸ್ತುತ ಆರ್ಥಿಕ ವರ್ಷದ (1992–93) ಆಯವ್ಯಯದಲ್ಲಿ ಈ ಕಾರ್ಯಕ್ಕಾಗಿ 25 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಆಗತ್ಯವಿರುವ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ನಿರ್ಮಾಣ ಕಾರ್ಯವನ್ನು ಸದ್ಯದಲ್ಲೇ ಪ್ರಾರಂಭಿಸಲಾಗುವುದು. ನಿರ್ಮಾಣ ಕಾರ್ಯವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುವುದು.

ಅಲ್ಲದೆ, ಮಂಡ್ಯ ಜಿಲ್ಲೆಯಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯ ಸುಧಾರಣೆಗಾಗಿ ಟಿ.ಕೆ. ಹಳ್ಳಿಯಲ್ಲಿರುವ 220:66 ಕೆ.ವಿ. ವಿದ್ಯುತ್ ಸ್ವೀಕರಣಾ ಕೇಂದ್ರದಿಂದ ಮಂಡ್ಯದಲ್ಲಿರುವ 66:11 ಕೆ.ವಿ. ಉಪ ವಿದ್ಯುತ್ ಕೇಂದ್ರಕ್ಕೆ 66 ಕೆ.ವಿ. ಡಿ.ಸಿ. ವಿದ್ಯುತ್ ಲೈನನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಪ್ರಸ್ತುತ ಸಾಲಿನ (1992–93)ರ ಆಯವ್ಯಯದಲ್ಲಿ ಈ ಕಾರ್ಯಕ್ಕಾಗಿ 50 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಲೈನಿನ ನಿರ್ಮಾಣ ಕಾರ್ಯವನ್ನು 1992–94ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಮಂಡಳಿಯು ಎಲ್ಲಾ ಪ್ರಯತ್ನಗಳನ್ನು ಮಾಡುವುದು. ಮಂಡಳಿಯ ಮಂಡ್ಯ ವಿಭಾಗದಲ್ಲಿ ವಿದ್ಯುದ್ದೀಕರಣಕ್ಕೆ ಸಂಬಂಧಿಸಿದಂತೆ ಬೇಕಾಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್ ಮತ್ತು ವಿದ್ಯುತ್ ತಂತಿಗಳ ಕೊರತೆ ಇರುವ ವಿಷಯ ಮಂಡಳಿಯ ಗಮನಕ್ಕೆ ಬಂದಿದ್ದು, ಈ ವಿಭಾಗಕ್ಕೆ ಬೇಕಾಗಿರುವ ವಿತರಣಾ ಟ್ರಾನ್ಸ್‌ಫಾರ್ಮರ್ ಮತ್ತು ವಿದ್ಯುತ್ ತಂತಿಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆ. ಈ ವಿಭಾಗದಲ್ಲಿ ವಿದ್ಯುತ್ ಕಂಬಗಳ ಕೊರತೆ ಇರುವುದಿಲ್ಲ.

(3) ನಗರದಲ್ಲಿ ಎಸ್.ಎಸ್.ಯು.ಐ. ಉಪಾಧ್ಯಕ್ಷರಾದ ಶ್ರೀ ಆಲಬರ್ಟ್ ಹೆನ್ರಿ ಅವರ ಮೇಲೆ ನಡೆದ ಹಲ್ಲೆ

ಶ್ರೀ ರಾಮಲಿಂಗಾ ರೆಡ್ಡಿ:– ಸುಮಾರು ಒಂದು ತಿಂಗಳ ಹಿಂದೆ ಬೆಂಗಳೂರು ನಗರದಲ್ಲಿ ಎಸ್.ಎಸ್.ಯು.ಐ. ಉಪಾಧ್ಯಕ್ಷರಾದ ಶ್ರೀ ಆಲ್ಬರ್ಟ್ ಹೆನ್ರಿರವರ ಮೇಲೆ ಹಲ್ಲೆ ನಡೆದಿದ್ದು ಇವರನ್ನು ಕೊಲ್ಲುವ ಸಂಚು ವಿಫಲವಾಯಿತು. ಈ ಬಗ್ಗೆ ಪೋಲಿಸರು ಪ್ರಯತ್ನ ಪಡುತ್ತಿದ್ದರೂ ಸಹಾ ಸಂಬಂಧಪಟ್ಟವರನ್ನು ಬಂಧಿಸಲು ಇನ್ನೂ ಸಾಧ್ಯವಾಗಿಲ್ಲ. ಇದರ ಜೊತೆಗೆ ಲಕ್ಕಸಂದ್ರ ಭಾಗಗಳಲ್ಲಿ ಇತ್ತೀಚಿನ ದಿನಗಳಲ್ಲಿ ದರೋಡೆ, ಕಳ್ಳತನ, ಹಾಗೂ ಹಲ್ಲೆ ಪ್ರಕರಣಗಳು ಹೆಚ್ಚಾಗುತ್ತಿವೆ. ಆದ್ದರಿಂದ ಈ ಭಾಗಗಳಿಗೆ ಹೆಚ್ಚಿನ ಪೋಲೀಸ್ ಸಿಬ್ಬಂದಿ ಒದಗಿಸಬೇಕು ಹಾಗೂ ಈ ಮೇಲ್ಕಂಡ ಹಲ್ಲೆ ಪ್ರಕರಣವನ್ನು ಸಿ.ಓ.ಡಿ.ಗೆ ಒಪ್ಪಿಸಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಯವರನ್ನು ಕೋರುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ಖಾತೆಗಳ ಸಚಿವರು):– ಸನ್ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ಮಾಡಲಿಚ್ಚಿಸುತ್ತೇನೆ.